Regd No. M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂವತ್ಸರ 30 ಸಂಚಿಕೆ 119] ಶುಕ್ರವಾರ 10—1—47 [ಬಿಡಿ ಪ್ರತಿ 3 ಪೈ

ಮದರಾಸು ಗೌರ್ನರರ ಮದುವೆಗೆ ಹತ್ತೇ ರೂಪಾಯಿ ಖರ್ಚ್!

ಹೋದ ವಾರ ಮದರಾಸು ಗೌರ್ನರಾದ ಸರ್ ಆರ್ಚಿಬಾಲ್ಡ್ ಎಡ್ವರ್ಡ್ ನೈ ಸಾಹೇಬರು ಕರ್ನೂಲು ಮತ್ತು ಕಡಪಾ ಜಿಲ್ಲೆಗಳಲ್ಲಿ ಪ್ರವಾಸ ಕೈಕೊಂಡಿದ್ದರು. ಈ ಮುಂಚಿನ ಗೌರ್ನರು ಸಾಹೇಬರುಗಳ ಪ್ರವಾಸಕ್ಕೂ ಇವರ ಪ್ರವಾಸಕ್ಕೂ ಬಹಳ ಅಂತರವಿತ್ತು. ಇವರ ಹಿಂದೆ ಪೋಲೀಸು ಪಡೆ ಇರಲಿಲ್ಲ. ಸರ್ ನೈ ಸಾಹೇಬರು ತಮ್ಮ ಮೋಟಾರಿನಲ್ಲಿ ಹಳ್ಳಿಹಳ್ಳಿಗಳಿಗೆ ಹೋಗಿ ಪ್ರತಿಯೆಕಬ್ಬ ಹಳ್ಳಿಗನವನೆ ಹೊಕ್ಕು ಅವನ ಪರಿಸ್ಥಿತಿಯನ್ನೂ, ಅವನ ಆದಾಯ ಖರ್ಚನ್ನು ಬಾಯಿಗೂಡಿಸುವ ವಿಧಾನವನ್ನೂ ಕೇಳಿಕೊಳ್ಳುತ್ತಿದ್ದರು. ಒಬ್ಬ ಹಳ್ಳಿಯವನಿಗೂ ಅವರಿಗೂ ನಡೆದ ಸಂಭಾಷಣೆಯು ಈ ರೀತಿ ಇದ್ದಿತು,—

ಗೌ— ನಿನಗೆ ಎಷ್ಟು ಭೂಮಿ ಇದೆ?

ರೈತ— ನನಗೆ ೩ ಎಕರೆ ಭೂಮಿ ಇದೆ.

ಗೌ— ಅದರಿಂದ ಆದಾಯವೇನು?

ರೈ— ವರ್ಷಕ್ಕೆ ರೂ. 60.

ಗೌ— ನೀವು ಎಷ್ಟು ಜನರಿರುವಿರಿ?

ರೈ— ನಾನು ನನ್ನ ಹೆಂಡತಿ ಒಬ್ಬ ಮಗ, ಒಬ್ಬ ಮಗಳು.

ಗೌ— ಒಂದು ವರ್ಷಕ್ಕೆ ೬೦ ರೂ ಇಷ್ಟು ಮಂದಿಗೆ ಸಾಲುತ್ತದೆಯೇ

ರೈ— ಇಲ್ಲ.

ಗೌ— ಹಾಗಾದರೇ ನೀವು ಹೇಗೆ ಜೀವನ ಸಾಗಿಸುವಿರಿ?

ರೈ— ಕೂಲಿ ಮಾಡಿ,

ಗೌ— ನಿನಗೆ ಸಾಲವಿದೆಯೆ?

ರೈ— ನನಗೆ ರೂ ೩೦೦ ಸಾಲವಿದೆ

ಗೌ— ನಿನಗೆ ಇಷ್ಟೇಕೆ ಸಾಲವಾಯಿತು?

ರೈ— ನನ್ನ ಮಗನ ಮಗಳ ಲಗ್ನಕ್ಕಾಗಿ.

ಗೌ— ನನ್ನ ಲಗ್ನಕ್ಕೆ ನಾನು ಹತ್ತೆ ಹತ್ತು ರೂಪಾಯಿಗಳನ್ನು ಖರ್ಚು ಮಾಡಿದೆ, ನಿನೇಕೆ ಇಷ್ಟು ಖರ್ಚು ಮಾಡಿದಿ?

ರೈ— ಮದುವೆಯಲ್ಲಿ ವಸ್ತ್ರಾಭರಣಗಳಿಗಾಗಿ ಜನರಿಗೆ ಊಟಕೊಡಲಿಕ್ಕಾಗಿ

ಗೌ— ನಾನು ನನ್ನ ಹೆಂಡತಿಗೆ ಯಾವ ಆಭರಣವನ್ನೂ ಇಡಲಿಲ್ಲ. ಅದರು ಮದುವೆಯಾಯಿತು.

ರೈ— ಈ ದೇಶದ ಹುಡುಗಿಯರು ಇಂಗ್ಲೀಷ ಹುಡುಗಿಯಂತಲ್ಲಾ ಸು ಆಭರಣವಿಲ್ಲದೇ ನಮ್ಮ ಹುಡುಲಗ್ನಕ್ಕೆ ನೇ ಒಪ್ಪುದಿಲ್ಲ.

ಪತ್ರಿಕೋದ್ಯೋಗಿ ಸಂಘ

ಮೈಸೂರು ಜ 10 — ಮೈಸೂರು ನಗರದಲ್ಲಿ ಪತ್ರಿಕೋದ್ಯೋಗಿ ಸಮ್ಮೇಳನವನ್ನು ಮೈಸೂರು ಪತ್ರಿಕೋದ್ಯೋಗಿ ಸಂಘದ ಆಶ್ರಯದಲ್ಲಿ ನಡೆಸುವುದು ಸಾಧ್ಯವಿಲ್ಲವೆಂದು ನಿನ್ನೆ ಸಂಜೆ ಶ್ರೀ ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಪತ್ರಿಕೋದ್ಯೋಗಿ ಸಂಘದ ವಿಶೇಷ ಸಭೆಯಲ್ಲಿ ತೀರ್ಮಾನವಾಯಿತು.

ಶ್ರೀ ನಾಡಿಗ ಕೃಷ್ಣಮೂರ್ತಿ ಪೌರವಾಣಿ ಸಂಪಾದಕ ಶ್ರೀ ದೊರೆಸ್ವಾಮಿ ಮತ್ತು ದಿವಾನರುಗಳನ್ನು ಒಟ್ಟಿಗೆ ಆಹ್ವಾನಿಸಿ ಸತ್ಕರಿಸಬೇಕೆಂದು ಶ್ರೀ ಟಿ. ನಾರಾಯಣರು ಸೂಚಿಸಿದರು.

ಪತ್ರಿಕೋದ್ಯೋಗಿ ಸಂಘದ ಕಟ್ಟಡಕ್ಕಾಗಿ ಸೊಗಸಾದ ನಿವೇಶನವನ್ನು ಪಡೆಯಲು ಶ್ರೀ ಜೋಯಿಸ್ ಶ್ರೀ ಗೋಪಾಲಕೃಷ್ಣರಾವ್ ಶ್ರೀ ರಂಗಯ್ಯ ಮತ್ತು ಶ್ರೀ ಜಿ. ಎಲ್. ಸ್ವಾಮಿಯವರಿಂದ ಕೂಡಿದ ಸಮಿತಿಯೊಂದನ್ನು ರಚಿಸಲಾಯಿತು.

ಗೌ— ಹೀಗೇನು ಇನ್ನು ಮೇಲೆ ಇಷ್ಟು ಖರ್ಚು ಮಾಡಬೇಡ.

ರೈ— ಖರ್ಚು ಹೀಗೆನಿಲ್ಲುತ್ತೆ ಸ್ವಾಮಿ.

ನಂತರ ಗೌರ್ನರು ಸಾಹೇಬರು ಹಳ್ಳಿಯ ಹೊಲಗಳ ಬೆಳೆಯನ್ನು ನೋಡುತ್ತಾ ಇನ್ನೊಂದು ಹಳ್ಳಿಗೆ ಹೋದರು. ಅಲ್ಲಿಯ ರೈತರು ಆ ಹಳ್ಳಿಗೆ ಒದಗಿಸಲ್ಪಟ್ಟಿದ್ದ ಕಲ್ಲು ಮಂಣು ನೀರು ಕೂಡಿ ಹುಳ ಮೆತ್ತಿದ್ದ ಧಾನ್ಯವನ್ನು ಗೌವರ್ನರು ಸಾಹೇಬರಿಗೆ ತೋರಿಸುತ್ತಾ ನಮ್ಮ ಹಳ್ಳಿಯ ಒಳ್ಳೆ ಧಾನ್ಯವನ್ನು ಅಧಿಕಾರಿಗಳ ತೆಗೆದುಕೊಂಡು ಹೋಗಿ ಇಂತಹ ಮುಗ್ಗು ಧಾನ್ಯವನ್ನು ನಮಗೆ ಒದಗಿಸಿರುವರು. ನೋಡಿರಿಯೆಂದು ಹೇಳಿದರು. (ನ. ಸಂ.)

ರಾಜಸಂದೇಶ

ಬೆಂಗಳೂರು ಜ 9 — ನಿನ್ನೆಯ ದಿವಸ ದಿವಾನರು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರವರ ರಾಜ್ಯಾಂಡ ಪ್ರಗತಿ ಸಂದೇಶವನ್ನು ತಿಳಿಸಿದರು.

೧೦ ಗಜ ಗಿರಣಿ ಬಟ್ಟೆ

ಬೆಂಗಳೂರು ಜ 9 — 10 ಗಜಗಳ ಪಾಟಿದಾರೂ ಮಿಲ್ ಬಟ್ಟೆ ಅವಶ್ಯಕವೆಂದೂ ಸರ್ಕಾರವನ್ನು ಒತ್ತಾಯ ಪಡಿಸಲು ಪತ್ರಿಕಾ ಸಹಕಾರ ಅಗತ್ಯವೆಂದೂ ಶ್ರೀ ಮಿರ್ಜಾ ಅಜಿ ಜುಲ್ಲಾಬೇಗ್‌ರವರು (ಸಂಘದ ಅಧ್ಯಕ್ಷರು ತಿಳಿಸಿದರು.

ಬರ್ಮ-ಭಾರತ ಭಾಂಧವ್ಯ

ಭಾರತೀಯ ಸಂಸ್ಥಾನಗಳನ್ನು ಪಾಕೀಸ್ತಾನಕ್ಕೆ ಸೇರಿಸುವ ಇಚ್ಛೆ ಇಲ್ಲ ಬ್ರಿಟಿಷ್ ಪ್ರಾಂತಗಳ ಮುಸ್ಲಿಂ ಭಾಗಗಳನ್ನು ಮಾತ್ರ ಸೇರಿಸುತ್ತೇವೆ ಮಾಂಗಾಡ್ ಸೇರಿಸುವುದಿಲ್ಲ ಎಂಬುದಾಗಿ ಜಿನ್ನಾ ಹೇಳಿದ್ದಾರೆ.

ಮಾಂಗಾಡ್ ಪ್ರಾಂತದ ಬಗ್ಗೆ ಮಿ|| ಜಿನ್ನಾರವರ ಹೇಳಿಕೆ ಹಿಂದೂ ಸ್ಥಾನ ಮತ್ತು ಬರ್ಮಾಗಳಿಗೆ ಸ್ನೇಹ ಬಾಂಧವ್ಯ ತರುವುದರಲ್ಲಿ ಹಿತಕಾರಿಯಾಗಿದೆಯೆಂದು ಬರ್ಮ ಮಂತ್ರಿಮಂಡಲದ ಉಪಾಧ್ಯಕ್ಷ ಅಂಗಸಾರ್ ಹೇಳಿದ್ದಾರೆ.

ಶ್ರೀ ಗೋಪಾಲರಾವ್

ಮಂಗಳೂರು ಜ 9 — ಐವತ್ತು ಸಾವಿರ ರೂ. ಗಳಿಗೆ ಹೆಚ್ಚಿಲ್ಲದಂತೆ ಶ್ರೀ ಗೋಪಾಲರಾಯರ ಆಸ್ತಿಯಲ್ಲಿ ವಶಪಡಿಸಿಕೊಳ್ಳಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಜ್ಞೆ ಮಾಡಿದ್ದಾರೆ.

ನಾಳೆಯ ದಿವಸ ತಪ್ಪದೇ ಓದಿ

ವಿಲಾಪತ್ - ಪಾಕಿಸ್ತಾನ್ ಸ್ಕೀಂ

ಜಗದ್ಗುರು ಮಹಾತ್ಮಾ ಗಾಂಧಿ ಭಾರತದ ಸರ್ವಾಧಿಕಾರಿ

ಮಾಣಿಂಪುರ (ನವಕಾಲಿ) ಜ 8 — ಮಹಾತ್ಮಾ ಗಾಂಧಿಯವರಿಗೆ ಬರುವ ಕಾಗದ ಪತ್ರಗಳು ಅವರು ಹೊದಲ್ಲಿಗೆ ಕಳುಹಿಸಲಾಗುತ್ತಿದೆ ಇಲ್ಲಿಗೆ ಬಂದ ಅನೇಕ ಕಾಗದಗಳಲ್ಲಿ ಜಗದ್ಗುರು ಮಹಾತ್ಮಾಗಾಂಧಿ ಭಾರತ ಸರ್ವಾಧಿಕಾರಿ ಎಂದು ವಿಳಾಸ ಬರೆಯಲ್ಪಟ್ಟಿವೆ.

ರಾಜಮನೆತನದ ಆಭರಣಗಳು ಕಾಳಸಂತೆಯಲ್ಲಿ

ಮಿಯಿಸ್ ಬೋಡ್ ಜ 9 — ಹೊಹೊಜಲಿದಲ್ಲಿರುವ ಜರ್ಮನಿಯ ರಾಜಮನೆತನದ 3 ರಾಜ ಕುಮಾರಿಯರು ತಮ್ಮ ಆಭರಣಗಳನ್ನು ಕಾಳಸಂತೆಯಲ್ಲಿ ಬಿಕರಿ ಮಾಡುತ್ತಿರುವುದಾಗಿ ಪ್ರಕಟವಾಗಿದೆ.

೧ ಆಣೆಗೆ ೪೫೦೭೨ ಪೌಂಡು

ಡಾಂಕ್ಯಾಸ್ಟರ್ ಜ 7 — ಡಾಂಕಾಸ್ಟರಿದಡೇವಿಸ್ ಒಂದು ಪುಟ್ ಬಾಲ್ ಸ್ಪರ್ಧೆಯಲ್ಲಿ 13 ಪಂಥಗಳನ್ನು ಸರಿಯಾಗಿ ತಿಳಿಸಿ 45072 ಪೌಂಡನ್ನು ಪಡೆದನು, ಅವನು ಕೊಟ್ಟ ಪ್ರವೇಶಧನ ೧ ಪೆನ್ನಿ.

ಕೆಲಸದಿಂದ ವಜಾ

ಪೆಷಾವರ ಜ ೫ — ಭಾರತ ರಾಜಕೀಯ ಶಾಖೆಯ ಇಬ್ಬರು ಏಜೆಂಟರುಗಳನ್ನು ಕೆಲಸದಿಂದ ವಜಮಾಡಲಾಗಿದೆ.

ಚನ್ನಪಟ್ಟಣ

ಇಲ್ಲಿ ನಡೆದ ಗಲಭೆ ಸಂಬಂಧದಲ್ಲಿ ಏಳತ್ತು ಮಂದಿ ದಸ್ತಗಿರಿ ಮಾಡಲ್ಪಟ್ಟಿರುವುದಾಗಿಯೂ ಏಳು ಮಂದಿ ಮೇಲೆ ಕ್ರೋಸ್ ಪೇಟೆ ನ್ಯಾಯಾಸ್ಥಾನದಲ್ಲೇ ಮೊಕದ್ದಮೆ ಹೂಡಲಾಗಿದೆಯೆಂದೂ ಇದೇ ತಾ|| 16 ರಿಂದ ಶಾಲೆಗಳನ್ನು ತೆರೆಯಲಾಗುವುದೆಂದೂ ಗೊತ್ತಾಗಿದೆ.

ವಿದ್ಯಾರ್ಥಿ ಸಮ್ಮೇಳನ

ನೆವದೆಹಲಿ ಜ 8 — ಏಷ್ಯಾಖಂಡದ ವಿದ್ಯಾರ್ಥಿ ಸಮ್ಮೇಳನ ಆಗಸ್ಟ್ ಮಾಹೆಯಲ್ಲಿ ದೆಹಲಿಯಲ್ಲಿ ಸೇರುವುದು. ಇಡೀ ಏಷ್ಯಾದಿಂದ ಪ್ರತಿನಿಧಿಗಳು ಬರುವರು.

—೦—

ಪೆಷಾವರ್ ಜ 8 — ಗಡಿನಾಡಿನಲ್ಲಿ ಬಲಾತ್ಕಾರ ಮತಾಂತರ ಗೊಳಿಸುವುದು ನಡೆಯುತ್ತಿರುವುದಾಗಿ ಹೇಳಲ್ಪಟ್ಟಿದೆ.

ತ್ಯಾಗರಾಜ ಸ್ವಾಮಿಗಳವರ ಶತಮಾನೋತ್ಸವ

ಮೈಸೂರು ಬ್ರದರ್ಸ್‌ರವರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ಇದೇ ಮಾಘ 11, 12, 13 ನೇ ತಾರೀಖುಗಳಲ್ಲಿ (ಶನಿವಾರ, ಭಾನುವಾರ, ಮತ್ತು ಸೋಮವಾರ) ಶ್ರೀ ತ್ಯಾಗರಾಜಸ್ವಾಮಿಗಳ ಶತಮಾನೋತ್ಸವವು ವೈಣಿಕ ಪ್ರವೀಣ ಸಂಗೀತ ವಿಶಾರದ ವಿ. ವೆಂಕಟಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಡುವುದು. ಶನಿವಾರ ಮಂದಿರದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಸಂಗೀತವೂ, ಭಾನುವಾರ ಮೈಸೂರು ಬ್ರದರ್ಸ್‌ರವರಿಂದ ತ್ಯಾಗರಾಜ ಕೃತಿಗಳ ಹಾಡುಗಾರಿಕೆಯೂ ಮತ್ತು ನೂತನವಾಗಿ ರಚಿಸಲ್ಪಟ್ಟ ಮೈಸೂರು ಪೌರಸಭೆಯು ಮಾನ್ಯಸದಸ್ಯರೆಲ್ಲರಿಗೂ ಒಂದು ಸತ್ಕಾರಕೂಟವೂ, ಸೋಮವಾರ ಮೈಸೂರಿನ ಸಂಗೀತ ವಿದ್ವಾಂಸರುಗಳು ಸಂಜೆ ಆರು ಗಂಟೆಗೆ ಪ್ರಾರಂಭವಾಗುವುದು. ಸರ್ವರಿಗೂ ಆಹ್ವಾನವುಂಟು.

ಕಳ್ಳತನಗಳು

ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ಟಿ. ಶ್ರೀನಿವಾಸಮೂರ್ತಿಯವರು ಈ ರೀತಿ ತಿಳಿಸುತ್ತಾರೆ —

ಕೃಷ್ಣಮೂರ್ತಿಪುರಂನಲ್ಲಿ ಕಳ್ಳತನ ಜಾಸ್ತಿಯಾಗಿದೆ. ಪೋಲೀಸ್ ಉಸ್ತುವಾರಿ ಜಾಸ್ತಿ ಇಡಬೇಕೆಂದು ಆ ಮೊಹಲ್ಲ ಜನರು ಬೇಡಿಕೊಳ್ಳುತ್ತಾರೆ.

ಸಂಯುಕ್ತ ರಾಜ್ಯದಲ್ಲಿ ವಾಸಿಸುವ ಸುಮಾರು ೧೦೦೦ ಜನರಲ್ಲಿ ೧೫೫ ಕ್ಕೆ ಮೇಲ್ಪಟ್ಟವರು ಲಂಡನ್ನಿನವರು

ಸರಸೇಕರ ಸಂಗೀತ ಕಛೇರಿಗಳೂ ನಡೆಯುತ್ತವೆ. ದಿನಚರಿ ಕಾರ್ಯಕ್ರಮಗಳು ಸಂಜೆ ಆರು ಗಂಟೆಗೆ ಪ್ರಾರಂಭವಾಗುವುದು. ಸರ್ವರಿಗೂ ಆಹ್ವಾನವುಂಟು.

ಏಶ್ವಕರ್ಣಾಟಕ, ಪ್ರಜಾಮತ, ಜನವಾಣಿ ಮುಂತಾದ ಮೈಸೂರಿನ ಪತ್ರಿಕೆಗಳು ಪ್ರಶಂಸಿಸಿರುವ, ರಾಮರಾಜ್ಯದ ಸುಧೀರ ಗಾಯಕಿ ರಂಜನಾ ನಟಿಸಿರುವ

ಪ್ರಕಾಶ್‌ರವರ 'ಹಮ್ಮೀರ ಸಂಸಾರ್'

10-1-47 ರಿಂದ .... ರಾಜಕಮಲ್

3 ನೇ ವಾರ .... ಟಾಕೀಸಿನಲ್ಲಿ

Morning Shows at 10-30 A. M. From 10 - 1 - 47

Starring — SECRETS OF SCOTLAND YARD

Edgar Barrier, Stephanic, etc. Vijaya Agencies, Mysore

ಪೊಂಗಲ್ ಹಬ್ಬಕ್ಕಾಗಿ

10—1—47 ರಿಂದ .... ಅಮೋಘ ಪ್ರಾರಂಭ

ಪ್ರತಿದಿನ 3 ಪ್ರದರ್ಶನಗಳು

ಬೆಂಗಳೂರು .... ಮೈಸೂರು

ಶಿವಾಜಿ — ನ್ಯೂ ಅಪೇರ

ಚಿತ್ರಾಲಯಗಳಲ್ಲಿ

ಪೊನ್ನುರುವಿ

(ತಮಿಳು)

ಮಹಾಭಾರತದಿಂದ ಆರಿಸಲ್ಪಟ್ಟ, ಕರ್ಣನ ವಿವಾಹ, ಜೀವನ, ನಡತೆಗಳನ್ನು ಚಿತ್ರಿಸಿರುವ ಕಥೆ [ಶುಭ]

— — ಅಭಿನಯ — —

ಕೊತ್ತಮಂಗಳಂ ಸೀನು, ಕೆ. ಟಿ. ರುಕ್ಮಿಣಿ, ಟಿ. ಎ. ದೊರೈರಾಜ್

For Bookings

SHREE VIJAYA PICTURES

197 Gandhinagar, Bangalore City

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ನ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಇಂಪಲಿಗೆ ಬರೆಯಿರಿ —

ಪಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ಕರಸ್ತೆ, ಜಿ. ಟಿ. ಮದರಾಸು.

At Opera — From 10–1–47

PONNURUVI

ಪೊನ್ನುರುವಿ

ಅಭಿನಯ — ಕೊತ್ತಮಂಗಳಂ ಸೀನು ಕೆ. ಟಿ. ರುಕ್ಮಿಣಿ ಟಿ.ಎ. ದೊರೈರಾಜ್

At Ranjit—— From 3–1–47

CARAVAN

ಅರೂಪ್ — ಕಮಲಾ ಚಟರ್ಜಿ — ಪಾತ್ರವಹಿಸಿರುವ

ಕಾರವಾನ್

Edited, Printed and Published by M. S Krishna Rao at the Satyavadi Press ChamarajAgrahar, Mysore.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--